# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** 767

**ಸದಸ್ಯರ ಹೆಸರು** : ಶ್ರೀ ಎಂ.ಎಲ್. ಅನಿಲ್ ಕುಮಾರ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

**ಉತ್ತರಿಸುವ ದಿನಾಂಕ** : 26.12.2022

**ಉತ್ತರಿಸುವ ಸಚಿವರು** : ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯ ಸರ್ಕಾರವು ಗೆಜೆಟಿಯರ್‌ಗಳನ್ನು ಬಿಡುಗಡೆಗೊಳಿಸುವ ಉದ್ದೇಶವೇನು; (ಸಂಪೂರ್ಣವಾದ ಮಾಹಿತಿ ನೀಡುವುದು) | ಸ್ವಾತಂತ್ರ್ಯಪೂರ್ವದಲ್ಲಿ ಪ್ರಕಟಿಸಿದ್ದ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಪರಿಷ್ಕರಿಸುವ ಮತ್ತು ಸ್ವಾತಂತ್ರ್ಯಾ ನಂತರದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧಿಸಿರುವ ಪ್ರಗತಿಯನ್ನು ಕ್ರೋಢೀಕರಿಸಿ ಗ್ಯಾಸೆಟಿಯರ್‌ಗಳಲ್ಲಿ ಅಳವಡಿಸುವ ಉದ್ದೇಶದಿಂದ ಗ್ಯಾಸೆಟಿಯರ್‌ಗಳನ್ನು ಬಿಡುಗಡೆಗೊಳಿಸಲಾಗುತ್ತಿದೆ. |
| ಆ) | ರಾಜ್ಯದಲ್ಲಿ ಇಲ್ಲಿಯವರೆಗೂ ಜಿಲ್ಲಾ ಗೆಜೆಟಿಯರ್‌ಗಳನ್ನು ಯಾವ ಯಾವ ವರ್ಷದಲ್ಲಿ ಬಿಡುಗಡೆಗೊಳಿಸಲಾಯಿತು; (ವರ್ಷವಾರು ಸಂಪೂರ್ಣವಾದ ಮಾಹಿತಿ ನೀಡುವುದು ) | ವಿವರಗಳನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಇ) | ಚಿಕ್ಕಬಳ್ಳಾಪುರ ಜಿಲ್ಲೆಯಾಗಿ 15 ವರ್ಷಗಳಾದರೂ ಇಲ್ಲಿಯವರೆಗೆ ಜಿಲ್ಲಾ ಗೆಜೆಟಿಯರ್ ಮುದ್ರಣಗೊಳ್ಳದಿರಲು ಕಾರಣವೇನು; ಜಿಲ್ಲಾ ಗೆಜೆಟಿಯರ್ ಮುದ್ರಣ ಸಂಬಂಧ ವಿಳಂಬವಾಗುತ್ತಿರಲು ಕಾರಣವೇನು; (ಮಾಹಿತಿ ನೀಡುವುದು ) | ಕರ್ನಾಟಕ ಗ್ಯಾಸೆಟಿಯರ್ ಇಲಾಖೆ ಯೋಜಿತ ಕಾರ್ಯಕ್ರಮಗಳಂತೆ ಗ್ಯಾಸೆಟಿಯರ್‌ಗಳನ್ನು ಪ್ರಕಟಿಸಲು ಕ್ರಮ ವಹಿಸುತ್ತಿದೆ. ಸರ್ಕಾರದ ಆದೇಶ ಸಂಖ್ಯೆ :ಕಸಂವಾ 13 ಕರಾಗೆ ಆಕ 2020, ದಿನಾಂಕ:03/08/2020ರನ್ವಯ 2020-21ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಗ್ಯಾಸೆಟಿಯರ್‌ಗಳನ್ನು ಪ್ರಕಟಿಸುವ ಕಾರ್ಯವನ್ನು ಇಲಾಖೆಯು ಹಮ್ಮಿಕೊಂಡಿದೆ. ಪ್ರಸಕ್ತ ಸಾಲಿನಲ್ಲಿ ಮುಂದುವರೆದ ಯೋಜನೆಗಳಡಿ ಸದರಿ ಕಾರ್ಯ ಪ್ರಗತಿಯಲ್ಲಿದೆ. ಗ್ಯಾಸೆಟಿಯರ್ ಪ್ರಕಟಣೆಗೆ ಸಂಬಂಧಿಸಿದಂತೆ ಸಲಹಾ ಸಮಿತಿಯ ಮುಂದೆ ಮಂಡಿಸಲು ಅಧ್ಯಾಯಗಳನ್ನು ಪರಾಮರ್ಶಿಸಿ ಸಿದ್ಧಪಡಿಸಲಾಗುತ್ತಿದೆ. |

| | | |
|---|---|---|
| ಈ) | 2021ರಲ್ಲಿ ಜಿಲ್ಲಾ ಗೆಜೆಟಿಯರ್ ಸಂಬಂಧ ಜಿಲ್ಲೆಯ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯಾಗಾರ ಒಳಗೊಂಡಂತೆ ಸಭೆ ನಡೆಸಿದ್ದರೂ ಈವರೆಗೂ ಜಿಲ್ಲಾ ಗೆಜೆಟಿಯರ್ ಮುದ್ರಣ ಸಂಬಂಧ ಯಾವುದೇ ಪ್ರಗತಿ ಕಾಣದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದಲ್ಲಿ, ಚಿಕ್ಕಬಳ್ಳಾಪುರ ಜಿಲ್ಲೆಯ ಗೆಜೆಟಿಯರ್ ಯಾವ ಕಾಲಮಿತಿಯೊಳಗೆ ಮುದ್ರಣಗೊಳ್ಳುವುದು? (ಸಂಪೂರ್ಣವಾದ ಮಾಹಿತಿ ನೀಡುವುದು ) | ಜಿಲ್ಲಾ ಗ್ಯಾಸೆಟಿಯರ್ ಸಂಬಂಧ ಅಪರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಿರುವುದಿಲ್ಲ.<br><br>ಮುಂದುವರೆದು, ಚಿಕ್ಕಬಳ್ಳಾಪುರ ಜಿಲ್ಲೆಯ ಗ್ಯಾಸೆಟಿಯರ್ ಪ್ರಕಟಣೆಗೆ ಸಂಬಂಧಿಸಿದಂತೆ ಯೋಜಿತ ಕಾರ್ಯಕ್ರಮಗಳನ್ವಯ ಕ್ರಮಕೈಗೊಳ್ಳಲಾಗುತ್ತಿದೆ. |

**ಸಂಖ್ಯೆ.ಕಸಂವಾ 12 ಕರಾಗೆ ಆಕ 2022**

(ವಿ.ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

ಅನುಬಂಧ

# ರಾಜ್ಯದಲ್ಲಿ ಇಲ್ಲಿಯವರೆಗೂ ಪ್ರಕಟಿಸಿರುವ ಜಿಲ್ಲಾ ಗ್ಯಾಸೆಟಿಯರ್‌ಗಳ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ಪ್ರಕಟಿಸಿರುವ ವರ್ಷ | ಪರಿಷ್ಕರಣೆ ಮಾಡಿರುವ ವರ್ಷ | ಭಾಷಾಂತರ ಮಾಡಿರುವ ವರ್ಷ |
|---|---|---|---|---|
| 1 | ಧಾರವಾಡ(ಆಂಗ್ಲ) | 1959 | 1995 (ಕನ್ನಡ) | 2003 (ಆಂಗ್ಲ) |
| 2 | ಕೊಡಗು (ಆಂಗ್ಲ) | 1965 | 1992 (ಕನ್ನಡ) | 1993 (ಆಂಗ್ಲ) |
| 3 | ಬಿಜಾಪುರ (ಆಂಗ್ಲ) | 1966 | 1999 (ಕನ್ನಡ) | 2007 (ಆಂಗ್ಲ) |
| 4 | ಗುಲಬರ್ಗಾ (ಆಂಗ್ಲ) | 1967 | 1997 (ಕನ್ನಡ) | 2005 (ಆಂಗ್ಲ) |
| 5 | ಚಿತ್ರದುರ್ಗಾ (ಆಂಗ್ಲ) | 1967 | – | – |
| 6 | ಮಂಡ್ಯ (ಆಂಗ್ಲ) | 1968 | 2003 (ಕನ್ನಡ) | 2009 (ಆಂಗ್ಲ) |
| 7 | ಕೋಲಾರ (ಆಂಗ್ಲ) | 1968 | 2005 (ಕನ್ನಡ) | 2012 (ಆಂಗ್ಲ) |
| 8 | ತುಮಕೂರು (ಆಂಗ್ಲ) | 1969 | 2017 (ಕನ್ನಡ) | – |
| 9 | ರಾಯಚೂರು (ಆಂಗ್ಲ) | 1970 | – | – |
| 10 | ಹಾಸನ (ಆಂಗ್ಲ) | 1971 | – | – |
| 11 | ಬಳ್ಳಾರಿ (ಆಂಗ್ಲ) | 1972 | – | – |
| 12 | ದಕ್ಷಿಣ ಕನ್ನಡ (ಆಂಗ್ಲ) | 1973 | 2007 (ಕನ್ನಡ) | 2011 (ಆಂಗ್ಲ) |
| 13 | ಶಿವಮೊಗ್ಗ (ಆಂಗ್ಲ) | 1976 | – | – |
| 14 | ಬೀದರ್ (ಆಂಗ್ಲ) | 1977 | 2019 (ಆಂಗ್ಲ) | – |
| 15 | ಚಿಕ್ಕಮಗಳೂರು (ಆಂಗ್ಲ) | 1981 | – | – |
| 16 | ಉತ್ತರ ಕನ್ನಡ(ಆಂಗ್ಲ) | 1985 | – | |
| 17 | ಬೆಳಗಾಂ (ಆಂಗ್ಲ) | 1987 | – | |
| 18 | ಮೈಸೂರು (ಆಂಗ್ಲ) | 1988 | – | |
| 19 | ಬೆಂಗಳೂರು ಗ್ರಾಮಾಂತರ (ಆಂಗ್ಲ) | 1989 | – | |
| 20 | ಬೆಂಗಳೂರು (ಆಂಗ್ಲ) | 1990 | – | |
| 21 | ಉಡುಪಿ (ಕನ್ನಡ ) | 2010 | – | 2012 (ಆಂಗ್ಲ) |
| 22 | ಚಾಮರಾಜನಗರ (ಕನ್ನಡ) | 2015 | – | |

ಮುಖ್ಯ ಸಂಪಾದಕರು
ಕರ್ನಾಟಕ ಗ್ಯಾಸೆಟಿಯರ್ ಇಲಾಖೆ,
ಬೆಂಗಳೂರು.